# ಹಕ್ಕಿಯಂತೆ ಹಾರಾಡುವ ಬ್ಯಾಟ್‌ವಿಂಗ್ ಟಾಪ್!



ವಿಶಿಷ್ಟ ಕಟ್ ಇರುವ, ತೋಳುಗಳ ಇಕ್ಕೆಲಗಳಲ್ಲಿ ಬಾವಲಿಯ ರೆಕ್ಕೆಗಳಂತಿರುವ 'ಬ್ಯಾಟ್‌ವಿಂಗ್ ಟಾಪ್' ಎಳೆವಯಸ್ಸಿನ ಹೆಂಗಳೆಯರಿಗೆ ಸಖತ್ ಲುಕ್ ಕೊಡುವಂಥವು. ಅರಬ್ ದೇಶಗಳಿಂದ ಬಂದ ಇಂಥ ಟಾಪ್‌ಗಳು ಫ್ಯಾಷನ್‌ಪ್ರಪಂಚದಲ್ಲಿ ಟ್ರೆಂಡಿಯಾಗಿದ್ದು ಜನಪ್ರಿಯವೂ ಆಗುತ್ತಿದೆ.

■ ಉಮಾ ವೇಣೂರು

ಫ್ಯಾಷನ್ ಲೋಕದಲ್ಲಿ ಟಾಪ್‌ಗಳು ಸದ್ಯ ರಾಣಿಯಂತೆ ಮೆರೆಯುತ್ತಿವೆ. ಜೀನ್ಸ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್, ಪಟಿಯಾಲ ಪ್ಯಾಂಟ್ ಹೀಗೆ ಯಾವುದೇ ವೈವಿಧ್ಯದ ಪ್ಯಾಂಟ್‌ಗಳಿರಲಿ, ಅದರ ಮೇಲೆ ಅಷ್ಟೇ ವೈವಿಧ್ಯಮಯ ಟಾಪ್‌ಗಳನ್ನು ಧರಿಸಿದರೆ ಫ್ಯಾಷನಬಲ್ ಆಗಿ ಕಾಣುವುದರಲ್ಲಿ ಸಂಶಯವಿಲ್ಲ.

ನೋಡಲು ವಿಭಿನ್ನ ಲುಕ್ ಕೊಡುವ ಬ್ಯಾಟ್‌ವಿಂಗ್ ಟಾಪ್ ಸದ್ಯಕ್ಕೆ ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಸೃಷ್ಟಿಸಿವೆ. ವಿಶಿಷ್ಟ ಕಟ್ ಹೊಂದಿರುವ ಈ ಟಾಪ್ ಯುವತಿಯರ ಅಚ್ಚುಮೆಚ್ಚಿನ ಉಡುಗೆ ಎನಿಸಿದೆ. ತೋಳುಗಳ ಇಕ್ಕೆಲಗಳಲ್ಲಿ ಬಾವಲಿಗಳಂತೆ ಹಾರಾಡುವ ಈ ಟಾಪ್ ಬೇರೆ ಬೇರೆ ಶೇಡ್ ಹಾಗೂ ಬಣ್ಣಗಳಲ್ಲಿ ಲಭ್ಯ. ಅಲ್ಲದೆ 'ಮಿಕ್ಸ್ ಅಂಡ್ ಮ್ಯಾಚ್' ಮಾಡಿಕೊಳ್ಳಲೂ ಈ ಟಾಪ್‌ಗಳು ಸೂಕ್ತವೆನಿಸಿವೆ. ಈ ತರದ ಟಾಪ್‌ಗಳಿಗೆ 'ಡೋಲ್ಮನ್ ಸ್ಲೀವ್ ಟಾಪ್' ಎಂದೂ ಕರೆಯುವರು.

ತೋಳುಗಳನ್ನು ಎತ್ತಿದರೆ ರೆಕ್ಕೆಂತೆ ಹಾರುವ ಸೈಡ್ ವಿಂಗ್ಸ್ ನೋಡಲು ಥೇಟ್ ಬ್ಯಾಟ್ (ಬಾವಲಿ) ಅನ್ನೇ ನೆನಪಿಸುತ್ತದೆ. ಹೀಗಾಗಿ ಈ ಟಾಪ್‌ಗೆ ಬ್ಯಾಟ್‌ವಿಂಗ್ ಟಾಪ್ ಎಂಬ ಹೆಸರು ಬಂದಿದೆ. ಹಾಗೆಂದು ಬಹಳ ವರ್ಷಗಳ ಹಿಂದೆ ಈ ರೀತಿಯ ಟಾಪ್ ಫ್ಯಾಷನ್ ಆಗಿತ್ತು. ಅದರ ಮಾರ್ಪಾಡು ಹಾಗೂ ಸುಧಾರಿತ ರೂಪ ಇದೀಗ ಸಮಕಾಲೀನ ಶೈಲಿಯ ಡಿಸೈನ್‌ನೊಂದಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಅಲ್ಲದೆ ಯುವತಿಯರ ಮನಗೆದ್ದಿದೆ.

ಬ್ಯಾಟ್ ವಿಂಗ್ ವಿನ್ಯಾಸದ ಟಾಪ್‌ಗಳು ಸೆಲೆಬ್ರೆಟಿ, ಸಿನಿತಾರೆಯರು, ಮಾಡೆಲ್ ಬೆಡಗಿಯರನ್ನು ಮಾತ್ರವಲ್ಲದೆ ಕಾಲೇಜು ಯುವತಿಯರನ್ನು, ಕಚೇರಿಗಳಿಗೆ ತೆರಳುವ ಹುಡುಗಿಯರ ಮನಸೂರೆಗೊಂಡಿದೆ. ಮೇಲ್ನೋಟಕ್ಕೆ ಅಂದದ ಕಫ್ತಾನದಂತೆ ಕಂಡರೂ ಪ್ಯಾಂಟ್ ಮೇಲೆ ಧರಿಸುವ ಕಾರಣ ಇದನ್ನು 'ಶಾರ್ಟ್ ಕಫ್ತಾನ' ಎಂದೂ ಕರೆಯಲಡ್ಡಿಯಿಲ್ಲ. ಇದನ್ನು ಮಿಕ್ಸ್ ಅಂಡ್ ಮ್ಯಾಚ್ ಮಾಡಿಯೂ ಧರಿಸಬಹುದಾಗಿದೆ.

ಚಿತ್ರ: ಬಿ.ಎಚ್. ಶಿವಕುಮಾರ್